**ಆಕರ್ಷಣೀಯವಾಗಿ ವ್ಯವಹರಿಸಿ**

ಯಲಹಂಕ : "ನಮಗೆ ದಿನನಿತ್ಯದ ಜೀವನದಲ್ಲಿ ಎಷ್ಟೇ ಕಷ್ಟಗಳಿದ್ದರೂ, ನಾವು ಇತರರೊಂದಿಗೆ ವ್ಯವರಿಸುವಾಗ ಶಾಂತತೆಯಿಂದ, ಪ್ರಸನ್ನವದನದಿಂದ ನಡೆದುಕೊಳ್ಳಬೇಕು" ಎಂದು ಖ್ಯಾತ ಸಾಹಿತಿ ಹಾಗೂ ಅಪ್ರತಿಮ ವಾಗ್ಮಿಗಳಾದ ಪ್ರೊ.ಅ.ರಾ.ಮಿತ್ರರವರು ಇಲ್ಲಿ ತಿಳಿಸಿದರು. ಗೊರೂರು ಪ್ರಶಸ್ತಿ ಸಂದರ್ಭದಲ್ಲಿ ಗಾಲಿ ಮತ್ತು ಅಚ್ಚು ಕಾರ್ಖಾನೆಯ ಲಲಿತ ಕಲಾ ಸಂಘ ಹಾಗೂ ಪುಟ್ಟೇನಹಳ್ಳಿ ಗೃಹ ನಿರ್ಮಾಣ ಮಂಡಳಿ ಬಡಾವಣೆ ಕ್ಷೇಮಾಭಿವೃದ್ಧಿ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಅ.ರಾ.ಮಿತ್ರರಿಗೆ ಏರ್ಪಡಿಸಲಾಗಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಪುಟ್ಟೇನಹಳ್ಳಿಯಲ್ಲಿರುವ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಬಡಾವಣೆಯಲ್ಲಿ ಸ್ವಗೃಹವನ್ನು ಹೊಂದಿರುವ ಅ.ರಾ.ಮಿತ್ರರು ತುಂಬಿದ ಸಭೆಯಲ್ಲಿ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾ, ತಮ್ಮ ವಾಕ್ಚಾತುರ್ಯದಿಂದ ಸಭೆಯನ್ನು ನಗೆಗಡಲಲ್ಲಿ ತೇಲಿಸಿದರು. ತಮ್ಮ ಭಾಷಣದಲ್ಲಿ ಸರ್ಕಾರಿ ಉನ್ನತ ಅಧಿಕಾರಿಗಳ ವ್ಯವಹಾರಿಕ ಧೋರಣೆಯನ್ನು ಉತ್ತಮವಾದ ಹಾಸ್ಯಮಯ ಉದಾಹರಣೆಗಳನ್ನು ನೀಡುತ್ತಾ ಖಂಡಿಸಿದ ಪ್ರೊ. ಮಿತ್ರರು ತಮ್ಮ ಅಪಾರ ಅನುಭವ ಪುಚ್ಛವನ್ನು ಜನರ ಮುಂದೆ ಬಿಚ್ಚಿಟ್ಟರು. ನಗರದ ಕಲುಷಿತಮಯ ವಾತಾವರಣದಿಂದ ದೂರವಿರುವ ಯಲಹಂಕ ಮುಂತಾದ ಕ.ಗೃ.ಮಂಡಳಿಯ ಉಪನಗರಗಳು ಜನತೆಗೆ ಪ್ರಶಾಂತ ವಾತಾವರಣವನ್ನು, ಶುದ್ಧ ಪರಿಸರವನ್ನೂ ನೀಡಿದೆ. ಇಂತಹ ಉಪನಗರವೊಂದರಲ್ಲಿ ತನ್ನಂತಹ ಸಾಮಾನ್ಯ ಸಾಹಿತಿಯೋರ್ವನಿಗೆ ಯಾವುದೇ ಒತ್ತಡವಿಲ್ಲದೇ ನಿರ್ಮಿತ ಗೃಹವೊಂದನ್ನು ಹಂಚಿಕೆ ನೀಡಿದ ಕ.ಗೃ.ಮಂಡಳಿಯ ಆಯುಕ್ತರಾದ ವಿನಯಕುಮಾರರಿಗೆ ಕೃತಜ್ಞತೆಗಳನ್ನು ಅವರು ಸೂಚಿಸಿದರು.

ಅದೇ ವೇದಿಕೆಯ ಮೇಲೆ ಹಾಜರಿದ್ದ ಕರ್ನಾಟಕ ಗೃಹ ಮಂಡಳಿಯ ಆಯುಕ್ತರಾದ ವಿನಯಕುಮಾರರು ಮಾತನಾಡುತ್ತಾ, ಅರ್ಹರಾದ ಸಮಾಜದ ಕೆಳವರ್ಗದ ಜನತೆಗೆ ಅನುಕೂಲವಾಗುವಂತೆ ಯಾವುದೇ ವಂಚನೆಗೆ ಆಸ್ಪದ ಕೊಡದಂತೆ ಹೆಚ್ಚಿನ ಜನಗಳಿಗೆ ಲಾಭವಾಗುವ ರೀತಿಯಲ್ಲಿ ತಾವು ಕಾರ್ಯನಿರ್ವಹಿಸುತ್ತಿರುವುದಾಗಿ ಹಾಗೂ ಮುಂದೆಯೂ ಇದೇ ರೀತಿ ನಡೆದುಕೊಳ್ಳುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಖ್ಯಾತ ವಿನೋದಗಾರರಾದ ಡಾ.ಎಂ.ಎಚ್.ಶ್ರೀಕಂಠಯ್ಯನವರು ತಮ್ಮ ಪರಮ ಮಿತ್ರರಾದ ಪ್ರೊ.ಅ.ರಾ.ಮಿತ್ರರ ಸಾಧನೆಯನ್ನು ಕೊಂಡಾಡಿದರು. ಉತ್ತಮ ಬರಹಗಾರರೂ ಹಾಗೂ ಅತ್ಯುತ್ತಮ ವಾಗ್ಮಿಗಳಾಗಿರುವ ಪ್ರೊ.ಮಿತ್ರರು ತಮ್ಮ ಹಾಸ್ಯ ಪ್ರವೃತ್ತಿಯೆಂಬ ಮೂರನೇ ಗುಣವನ್ನೂ ಬೆಳೆಸಿಕೊಂಡು ತ್ರಿವೇಣಿ ಸಂಗಮವಾಗಿರುವ ಅಪರೂಪದ ವ್ಯಕ್ತಿಯಾಗಿದ್ದಾರೆ ಎಂದು ಅವರು ಬಣ್ಣಿಸಿದರು. ಪ್ರೊ.ಮಿತ್ರರು ಗೊರೂರು ಪ್ರಶಸ್ತಿಯನ್ನು ಪಡೆಯಲು ಅತ್ಯಂತ ಅರ್ಹ ವ್ಯಕ್ತಿಯಾಗಿದ್ದರು ಎಂದು ಹೇಳಿದ ಶ್ರೀಕಂಠಯ್ಯನವರು, ಮಿತ್ರರ ಬರಹಗಳಲ್ಲಿ ವ್ಯಂಗ್ಯವಿಲ್ಲ – ನಂಜಿಲ್ಲ ಎಂದು ಹೊಗಳಿದರು.

ಇದೇ ಸಂದರ್ಭದಲ್ಲಿ ಗಾಲಿ ಮತ್ತು ಅಚ್ಚು ಕಾರ್ಖಾನೆಯ ಮುಖ್ಯ ತಾಂತ್ರಿಕ ಅಭಿಯಂತರರಾದ ಅಶೋಕರು ಮಾತನಾಡಿ, ಇಂತಹ ಕಾರ್ಯಕ್ರಮಗಳು ಇನ್ನು ಮುಂದೆಯೂ ಗಾಲಿ ಮತ್ತು ಅಚ್ಚು ಕಾರ್ಖಾನೆಯ ಕಾಲೋನಿಯಲ್ಲಿ ನಡೆಯಲಿ ಎಂದು ಆಶಿಸಿದರು.

ಕೇಂದ್ರಿಯ ಮೀಸಲು ಪಡೆಯ ಕಮಾಂಡಂಟರಾದ ಧನಂಜಯರವರು ಪ್ರೊ.ಮಿತ್ರರಿಗೆ ಶಾಲು ಹೊದಿಸಿ ಫಲ ತಾಂಬೂಲ ನೀಡಿ, ಸ್ಮರಣ ಕಾಣಿಕೆಯನ್ನು ನೀಡಿ ಗೌರವಿಸಿದರು. ಇದೇ ಕಾರ್ಯಕ್ರಮದಲ್ಲಿ ಗಾಲಿ ಮತ್ತು ಅಚ್ಚು ಕಾರ್ಖಾನೆಯ ಉನ್ನತ ಅಧಿಕಾರಿಗಳಾದ ಕೆ.ಎಲ್.ಛಾಬ್ರ, ಕೃಷ್ಣಮೂರ್ತಿ, ಮಾಂಗಲಿಕ್ ಮುಂತಾದವರು

ಪಾಲ್ಗೊಂಡಿದ್ದರು. ಇವರಲ್ಲದೇ ಯಲಹಂಕ ಬಿ.ಟಿ.ಸ್. ಡಿಪೋ ಮ್ಯಾನೇಜರರಾದ ಬಿ.ವಿ.ಎಂ. ದೇಸಾಯಿಯವರೂ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಪುಟ್ಟೇನಹಳ್ಳಿ ಕ.ಗೃ.ಮಂ. ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರಾದ ಗಣೇಶ ಮೂರ್ತಿಯವರು ಸ್ವಾಗತಿಸಿದರು. ಪ್ರೊ.ಶ್ರೀನಿವಾಸರಾವ್‌ರವರು ವಂದಿಸಿದರು. ದಾಕ್ಷಾಯಿಣಿಯವರು ಪ್ರಾರ್ಥಿಸಿದರು. ವಿಶ್ವನಾಥರವರು ನಿರ್ವಹಿಸಿದರು. ಕಾರ್ಯಕ್ರಮದ ನಂತರ ಪ್ರಯೋಗ ನಾಟಕ ತಂಡದಿಂದ 'ಅಹಾ ಬ್ರಹ್ಮಚಾರಿ' ಎಂಬ ಹಾಸ್ಯ ನಾಟಕವನ್ನು ಏರ್ಪಡಿಸಲಾಗಿತ್ತು.